# ಪ್ರಕಟಣೆ

ಶ್ರೀ ವಿನಾಯಕ ದೇವಾಲಯ, ಇಡಗುಂಜಿ ಇಲ್ಲಿ ತಾತ್ಕಾಲಿಕವಾಗಿ ಗೌರವಧನದ ಆಧಾರದ ಮೇಲೆ ಕೆಲಸ ಮಾಡಲು ಈ ಕೆಳಕಂಡ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಮರು ಪ್ರಕಟಣೆಯನ್ನು ಹೊರಡಿಸಿದ್ದು ಅರ್ಜಿ ಸಲ್ಲಿಸಲು ದಿನಾಂಕಃ 21–10–2024 ಕೊನೆಯ ದಿನವಾಗಿರುತ್ತದೆ.

ಎಲ್ಲಾ ಹುದ್ದೆಗಳಿಗೂ ಕನಿಷ್ಠ ವಯೋಮಿತಿ 18 ವರ್ಷ ಹಾಗೂ ಗರಿಷ್ಠ ವಯೋಮಿತಿ 40 ವರ್ಷ ನಿಗದಿಪಡಿಸಲಾಗಿದೆ.

ಅ.ನಂ.3 ರಿಂದ 6 ಮತ್ತು 9ರಲ್ಲಿನ ಹುದ್ದೆಗಳಿಗೆ ದಿನಾಂಕ: 27–10–2024 ಬೆಳಿಗ್ಗೆ 10.00 ಗಂಟೆಗೆ ಹಾಗೂ ಅ ನಂ. 1,2,7 ಮತ್ತು 8 ರಲ್ಲಿನ ಹುದ್ದೆಗಳಿಗೆ ದಿನಾಂಕ 03–11–2024 ರಂದು ಬೆಳಿಗ್ಗೆ 10.00 ಗಂಟೆಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉ.ಕ., ಕಾರವಾರ ಇಲ್ಲಿ ಸಂದರ್ಶನ ನಡೆಸಲಾಗುವದು. ಸಂದರ್ಶನಕ್ಕೆ ಪ್ರತ್ಯೇಕ ಸೂಚನಾಪತ್ರ ನೀಡಲಾಗುವುದಿಲ್ಲ. ಸೂಚನೆ ಮತ್ತು ಸಂಪೂರ್ಣ ವಿವರವನ್ನು ಜಿಲ್ಲಾ ನ್ಯಾಯಾಲಯದ ಮಾಹಿತಿ ಫಲಕ ಅಥವಾ ಶ್ರೀ ವಿನಾಯಕ ದೇವಾಲಯ, ಇಡಗುಂಜಿಯ ಸೂಚನಾಫಲಕದಿಂದ ಪಡೆಯಬಹುದು. ಪ್ರಕಟಣೆ ದಿನಾಂಕ 28–08–2024 ರಂತೆ ವಿವಿಧ ಹುದ್ದೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸುವ ಅಗತ್ಯ ಇರುವದಿಲ್ಲ. ಹುದ್ದೆಗಳ ವಿವರ ಈ ಕೆಳಗಿನಂತಿದೆ.

**ಆಯ್ಕೆಯಾದ ಅಭ್ಯರ್ಥಿಗಳಿಗೆ ಉಚಿತ ಊಟ ಮತ್ತು ಉಪಹಾರ ಇರುತ್ತದೆ.**

**ಹುದ್ದೆಗಳ ವಿವರ**

| ಅ. ನಂ. | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ | ಕನಿಷ್ಠ ವಿದ್ಯಾರ್ಹತೆ/ ಅನುಭವ | ಮಾಸಿಕ ಗೌರವಧನ | ವಾರ್ಷಿಕ ಗೌರವಧನ ಹೆಚ್ಚಳ ಶೇ. 1 | ಉಚಿತ ವಸತಿ ಸೌಲಭ್ಯ |
|---|---|---|---|---|---|---|
| 1 | ಮಣೆಗಾರರು | 01 | ಯಾವುದೇ ಪದವಿ | 20000/– | 200/– | ಇದೆ |
| 2 | ಗುಮಾಸ್ತರು | 01 | ಪಿ.ಯು.ಸಿ. | 12000/– | 120/– | ಇದೆ |
| 3 | ಮುಖ್ಯ ಅಡುಗೆ ತಯಾರಕರು | 02 | ದೊಡ್ಡ ಪ್ರಮಾಣದಲ್ಲಿ ಸುಮಾರು 1000 ಜನರಿಗೆ ಸಸ್ಯಹಾರ ಅಡುಗೆ ತಯಾರಿಸಿದ ಅನುಭವ ಹೊಂದಿರಬೇಕು. | 15000/– | 150/– | ಇದೆ |
| 4 | ಸಹಾಯಕ ಅಡುಗೆಯವರು ಕಂ. ಊಟ ಬಡಿಸುವವರು | 02 | – | 7500/– | 75/– | ಇಲ್ಲ |
| 5 | ಸ್ವಚ್ಛತೆಗಾರರು (ಭೋಜನಾಲಯ ಎಲ್ಲಾ ಪಾತ್ರೆಗಳನ್ನು ಸ್ವಚ್ಛಗೊಳಿಸುವವರು) | 06 | – | 7500/– | 75/– | ಇಲ್ಲ |
| 6 | ಭೋಜನಾಲಯದ ಮುಸುರೆ ಒರೆಸುವವರು (Wipers) | 02 | – | 6000/– | 60/– | ಇಲ್ಲ |
| 7 | ಭದ್ರತಾ ಸಿಬ್ಬಂದಿ | 06 | ಎಸ್.ಎಸ್.ಎಲ್.ಸಿ. | 10000/– | 100/– | ಇದೆ |
| 8 | ಕಛೇರಿ ಪರಿಚಾರಕ | 01 | ಎಸ್.ಎಸ್.ಎಲ್.ಸಿ. | 10000/– | 100/– | ಇದೆ |
| 9 | ಸ್ಕಾವೇಂಜರ್ | 02 | – | 10000/– | 100/– | ಇಲ್ಲ |

ಸಹಿ/– ರಿಸೀವರ ಶ್ರೀ ವಿನಾಯಕ ದೇವಾಲಯ, ಇಡಗುಂಜಿ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ